


### ಕನ್ನಡಿಗರ ಹೆಮ್ಮೆ

ಯುವ ಕ್ರಿಕೆಟ್ ಪ್ರತಿಭೆಗಳ ಕುರಿತ ಕರ್ನಾಟಕ ಎಕ್ಸ್‌ಪ್ರೆಸ್ ಓಂಕಾರ ಮೂರ್ತಿಯವರ ಲೇಖನ ಉತ್ತಮವಾಗಿತ್ತು. ಕರ್ನಾಟಕ ತಂಡಕ್ಕೆ ಭವಿಷ್ಯವೇ ಇಲ್ಲವೇನೋ ಎನ್ನುವ ಸಮಯದಲ್ಲಿ ಮತ್ತೊಮ್ಮೆ ತಲೆ ಎತ್ತಿ ನಿಲ್ಲುವಂತೆ ಮಾಡಿದ ಅರವಿಂದ್, ವಿನಯ್, ಮಿಥುನ್ ಅವರ ಸಾಧನೆ ಕನ್ನಡಿಗರಿಗೆ ಹೆಮ್ಮೆ ತಂದಿದೆ.

ಸತೀಶ್ ಶೆಟ್ಟಿಗಾರ್, ಜಪ್ತಿ/ಸಂಜಯಕುಮಾರ್,ಕೋಣನಕೇರಿ/ ನರೇಂದ್ರ ಸಿರಕಜೆ, ಮೈಸೂರು

### ಆಸೆ-ನಿರಾಸೆ!

ಶಿಕ್ಷಕರ ಅನಾಚಾರ, ಕೇದಾರ ಯಾತ್ರೆಯ ವೈಭವ, ಸ್ವಾರಸ್ಯಕರವಾದ ಕತೆ ಹಾಗೂ ನೀವು ಕೇಳಿದಿರಿ ಪ್ರಶ್ನೋತ್ತರಗಳನ್ನು ಒಳಗೊಂಡ ಶಿವರಾತ್ರಿ ವಾರದ ಸುಧಾ ಸಂಚಿಕೆ ಮನಸೆಳೆಯಿತು. ಆದರೆ ಮುಖಪುಟ ಲೇಖನ ಕರ್ನಾಟಕ ಎಕ್ಸ್‌ಪ್ರೆಸ್ ಓದೋಣ ಎಂದುಕೊಳ್ಳುವಷ್ಟರಲ್ಲೇ ಅಭಿಮನ್ಯು ಮಿಥುನ್ ಅವರನ್ನು ತಂಡದಿಂದ ಕೈಬಿಟ್ಟ ಸುದ್ದಿ ತಿಳಿದು ನಿರಾಸೆಯಾಯಿತು!

-ಡಾ. ಕೆ.ಕೆ. ಜಯಚಂದ್ರ ಗುಪ್ತ, ಹಾಸನ

### ಸಕಾಲಕ್ಕೆ ಕೇದಾರ ದರ್ಶನ

ಶಿವರಾತ್ರಿ ಸಮಯಕ್ಕೆ ಸರಿಯಾಗಿ ಕೇದಾರದ ಹಾದಿಯಲ್ಲಿ ವರ್ಣಚಿತ್ರಗಳೊಂದಿಗೆ ಮೂಡಿಬಂದ ಶಶಿರೇಖಾ ನಾಗೇಂದ್ರರ ಲೇಖನ ಮನಸ್ಸಿಗೆ ಮುದ ನೀಡಿತು.

-ಎಚ್.ಎಸ್. ಸುಶೀಲ, ಕೊಪ್ಪ/ ಯಮುನಾಬಾಯಿ, ಶಿವಮೊಗ್ಗ/ ನೆ.ಲ.ರಾಂ, ಬೆಂಗಳೂರು/ ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ

### ಪಂಪನ ಉಪೇಕ್ಷೆ: ದುರಂತ

ಆದಿ ಕವಿ ಪಂಪನ ಕುರಿತ ಎಂ.ಎಂ.ಪಾಟೀಲರ ಲೇಖನ ಸರ್ಕಾರದ ಕಣ್ಣು ತೆರೆಸಬೇಕು. ಪಂಪನ ಅಣ್ಣಿಗೇರಿಯಲ್ಲಿ ಸ್ಮಾರಕ ಆಗದಿರುವುದು ಸಾಂಸ್ಕೃತಿಕ ವಲಯದ ದುರಂತ.

ರಮಜಾನ ಕೊರ್ತಿ, ಬದಾಮಿ/ ಕೊಹಿಮ, ಬಸರಕೋಡು

### ಸುಬ್ಬಾಶಾಸ್ತ್ರಿ, ಪಾಪಪುಣ್ಯ

ಸುದ್ದಿ ಶೂರರು ಲೇಖನದಲ್ಲಿ ಪ್ರಸ್ತಾಪಿಸಿರುವ ಎಂ.ವಿ.ಕೃಷ್ಣಸ್ವಾಮಿ ಕುರಿತ ಬರಹದಲ್ಲಿ 'ಸುಬ್ಬಾ ಶಾಸ್ತ್ರಿ' (ಮೂರ್ತಿರಾಯರ 'ಆಷಾಡಭೂತಿ' ನಾಟಕ ಆಧಾರಿತ) ಹಾಗೂ 'ಪಾಪಪುಣ್ಯ' (ವಿ.ಸೀ.ಯವರ 'ಶ್ರೀಶೈಲ ಶಿಖರ' ನಾಟಕ ಆಧಾರಿತ) ಚಿತ್ರಗಳ ಪ್ರಸ್ತಾಪ ಇರಬೇಕಿತ್ತು. ಹೆಚ್ಚು ಪ್ರಚಾರದಲ್ಲಿ ಇರದಿರುವವರ ಕುರಿತ ಬರಹಕ್ಕೆ ಸುದ್ದಿ ಶೂರರು ಶೀರ್ಷಿಕೆ ಸರಿಯಾಗಲಿಲ್ಲ.

-ಹೊ.ಸ. ಪ್ರಕಾಶ್, ಅರಸೀಕೆರೆ/ ಮುಕುಂದ ಹೆರಕಲ್ಲ, ವಾಡಿ

### ಸಹೋದರಿಯರಲ್ಲವೆ?

ಅಂಚೆ ಮತ್ತು ಕಲೆ ಲೇಖನದ ಪ್ರಕಾರ ಪ್ರಧಾನ ಅಂಚೆ ಕಛೇರಿಯ ಸಮಾರಂಭಗಳ ವೇಳೆಯಲ್ಲಿ ವರ್ಣಮಯ ರಂಗೋಲಿ ಚಿತ್ರಿಸುವ ತಂಡದ ನಾಯಕಿ ಎಚ್.ಎಸ್. ರಾಜೇಶ್ವರಿ, ಅವರಿಗೆ ಸಾಥ್ ನೀಡುವವರು ಎಚ್.ಎಸ್. ಮಮತಾ ಮತ್ತು ಈ ಕುರಿತು ಬರೆದ ಲೇಖಕಿ ಎಚ್.ಎಸ್. ಶ್ರೀಮತಿ. ಇವರೆಲ್ಲರೂ ಸಹೋದರಿಯರೇ ಇರಬಹುದಲ್ಲವೇ? ಹಾಗೆ ಸಹೋದರಿಯರು ತಮ್ಮ ತಮ್ಮಲ್ಲೇ ಪ್ರಚಾರ ಕೊಟ್ಟುಕೊಳ್ಳಬಹುದೆ?

-ಚಂದ್ರಶೇಖರ ಆರಾಧ್ಯ, ಮೈಸೂರು

### ಶ್ಲಾಘನೀಯ

ಬೆಂಗಳೂರಿನ ಪ್ರಧಾನ ಅಂಚೆ ಕಚೇರಿಯಲ್ಲಿ ರಂಗೋಲಿ ಸ್ಪರ್ಧೆ ಏರ್ಪಡಿಸುವುದು ಶ್ಲಾಘನೀಯ.

-ಪ್ರಹ್ಲಾದರಾಜು ಬುರ್ಲಿ, ದಾವಣಗೆರೆ

### ಗಾಂಧಿ ಹೀಗಿದ್ದರೆ ರಾಚಪ್ಪನವರೆ?

ಗಾಂಧೀಜಿ ಬೆಳ್ಳಿಲೋಟ ಬಳಸುತ್ತಿದ್ದರು ಎಂದು ರಾಚಪ್ಪ ಹೋಳೂರು ತಮ್ಮ ಋಣಾನುಬಂಧ ಬರಹದಲ್ಲಿ ಹೇಳಿದ್ದಾರೆ. ಸರಳ ಜೀವಿ ಗಾಂಧೀಜಿ ಎಂದಾದರೂ ಹಾಗೆ ಮಾಡಲು ಸಾಧ್ಯವೇ?

ವಸಂತಿ ಬೆಂಗಳೂರು/ ದಿವಾಕರ, ಮೈಸೂರು

### ವಿಕೃತ ಶಿಕ್ಷಕರನ್ನು ಶಿಕ್ಷಿಸಿ

ಸಮೂಹ ಮಾಧ್ಯಮಗಳ ಕೆಲವು ಕಾರ್ಯಕ್ರಮಗಳ ದುಷ್ಪರಿಣಾಮದ ಪರಿಣಾಮವಾಗಿ ವಿಕೃತರಾಗುವ ಶಿಕ್ಷಕರ ಬಗ್ಗೆ ವೇದಾವತಿ ಬರೆದಿದ್ದಾರೆ. ಇಂತಹ ಶಿಕ್ಷಕರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಬೇಕು.

ವಿಭಾ ಮುರಳೀಧರ್, ತುಮಕೂರು/ ಗೀತಾಂಜಲಿ ರಾಜಶೇಖರಗೌಡ, ಕೊಟ್ಟೂರು/ ಡಿ.ಎಸ್.ಪಂಕಜ ಸುಬ್ರಮಣ್ಯ, ಬೆಂಗಳೂರು

### ಉತ್ತಮ ಕಥೆ

ವನಮಾಲ ಕಟ್ಟೆ ಗೌಡರ 'ಕಳ್ಳ ಹೊಕ್ಕ ಮನೆ' ಹೆಣ್ಣಿನ ಮೇಲಾಗುತ್ತಿರುವ ಶೋಷಣೆ, ಅತ್ಯಾಚಾರ ಅನಾವರಣಗೊಳಿಸಿದೆ. ಕತೆಗೆ ತಕ್ಕಂತ ಶಿರೋನಾಮೆ.

-ಎಚ್.ಎಂ. ಕಾಳಮ್ಮ, ಉತ್ತಂಗಿ/ ಆರ್.ಸುಭಾಶ್ಚಂದ್ರ, ದಾವಣಗೆರೆ/ ತಿಪ್ಪೇಸ್ವಾಮಿ ನಾಯಕ, ಹೊಸಪೇಟೆ

### ಬುದ್ಧಿ ಕಲಿಸಿದ ಲೇಖನ

ಬುದ್ಧಿಯ ಬೇಸಾಯ ವಿಚಾರ ಲಹರಿಯು ನಿಜವಾಗಿಯೂ ನಮ್ಮ ನಮ್ಮ ಬುದ್ಧಿಯನ್ನು ಯಾವ ರೀತಿಯ ಬೇಸಾಯ ಮಾಡಿಕೊಳ್ಳಬೇಕು ಎಂಬ ಮಾರ್ಗವನ್ನು ಸೂಚಿಸುತ್ತದೆ.

-ವಿಶ್ವನಾಥ ಪತಂಗೆ, ಗುಲಬರ್ಗಾ/ ಎಚ್.ಆನಂದಕುಮಾರ್, ಚಿತ್ರದುರ್ಗ

### ಬದುಕಿನ ಚಕ್ಕಡಿ!

ಚಿತ್ತಾರದ ಚಕ್ಕಡಿ, ಮಂಜುನಾಥ ಬಮ್ಮನಕಟ್ಟಿ ಲೇಖನದಲ್ಲಿ ಚಿತ್ತಾರದ ಕಲೆಯನ್ನು ಚಲಿಸುವ ಚಕ್ಕಡಿಯಲ್ಲಿ ಬಿಂಬಿಸಿರುವುದು ಅರ್ಥಪೂರ್ಣ. ಚಿತ್ರಕಲಾ ಶಿಕ್ಷಕ ವಿಜಯ ಕಿರೇಸೂರ ಅವರು ಸ್ಮರಣೀಯರು.

-ಮೇ.ಗೋ. ಸುಬ್ಬಣ್ಣ, ಮೇಗರವಳ್ಳಿ




ಬಿಳಿ ಮಚ್ಚೆಗಳೆ

ಪರಿಣಿತಿಯನ್ನು 50,000 ರೋಗಿಗಳು ಮೆಚ್ಚಿದ್ದಾರೆ.

ಹೊಸದಾಗಿ ಕಂಡುಹಿಡಿಯಲಾದ ಈ ಔಷಧಿಯನ್ನು ಉಪಯೋಗಿಸುವುದರಿಂದ ನಿಮ್ಮ ತ್ವಚೆಯ ವರ್ಣವು ಅಲ್ಪಕಾಲದಲ್ಲೇ ನೈಜವಾಗಿ ಬದಲಾಗುವುದು. ನಿಮ್ಮ ಕಾಯಿಲೆಯ ವಿವರಗಳನ್ನು ಕಳುಹಿಸಿರಿ ಅಥವಾ ದೂರವಾಣಿ ಮೂಲಕ ಮುಖ್ಯ ವೈದ್ಯಜಿಯನ್ನು ಸಂಪರ್ಕಿಸಿ.



ಲೈಂಗಿಕ ಸಮಸ್ಯೆ

ಖಂಡಿತ ಗುಣವಾಗುವುದು

ನಪುಂಸಕತೆ, ಗೊನೊರಿಯ, ಸಿಫಿಲಿಸ್, ಬಂಜೆತನ ಹಾಗೂ ಇತರೆ ಗೋಪ್ಯ ಲೈಂಗಿಕ ಸಮಸ್ಯೆಗಳನ್ನು ಆಯುರ್ವೇದಿಕ್ ಚಿಕಿತ್ಸೆ ಮೂಲಕ ಗುಣಪಡಿಸಬಹುದು. ಒಂದು ಕೋರ್ಸ್ ಔಷಧಿ ಹಾಗೂ ಉಚಿತ ಲಿಂಗವರ್ಧಕ್‌ಗೆ ನಮ್ಮನ್ನು ಸಂಪರ್ಕಿಸಲು ಸಂಕೋಚಪಡದಿರಿ.

ಸ್ತ್ರೀ ರೋಗ

ಬಿಳಿಸೆರಗು– ಬಿಳಿ ಅಥವಾ ರಕ್ತ, ಮುಟ್ಟಿನ ತೊಂದರೆ, ಬಂಜೆತನ, ರಕ್ತಹೀನತೆ ಅಶಕ್ತತೆ, ಸೊಂಟದ ನೋವು ಇತ್ಯಾದಿಗೆ ಖಾತರಿಯಾದ ಚಿಕಿತ್ಸೆಗಾಗಿ ಕೂಡಲೆ ನಮ್ಮನ್ನು ಸಂಪರ್ಕಿಸಿ.

ಆಕರ್ಷಕ ಸ್ತನಗಳಿಗೆ



ನಮ್ಮ ಯಶಸ್ವಿ ಆಯುರ್ವೇದಿಕ್ ಚಿಕಿತ್ಸೆ ಪಡೆದು ಅಲ್ಪಕಾಲದಲ್ಲೇ ನಿಮ್ಮ ಸ್ತನಗಳು ಸೂಕ್ತ ವೃದ್ಧಿ ಹೊಂದಲು ನಮ್ಮನ್ನು ಮುಕ್ತವಾಗಿ ಸಂಪರ್ಕಿಸಿರಿ.

Asia Ayurved P.O. Katri Sarai (Gaya)

Phone: 0631-2224881
09931840701 / 09334221088
09431025482 / 09835671211